**ದಿನಾಂಕಃ 15-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಎಮ್.ಎಮ್.ಎಲ್. ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ.ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -1 ಎಂದು, ಪಿರ್ಯಾದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -2 ಎಂದು, ಸ್ಥಳ ಪಂಚನಾಮೆಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -3 ಎಂದು, ವಾಹನದ ಜಪ್ತಿ ಪಂಚನಾಮೆಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -5 ಎಂದು, ದೋಷಾರೋಪಣೆ ಪಟ್ಟಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -6 ಎಂದು, 4 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿ -7 ಎಂದು, ಸಾಗರ್ ಮೋಟಾರ್ ಲೇಬರ್ ನ ಒಂದು ಬಿಲ್ಲನ್ನು ನಿ ಪಿ -8 ಎಂದು ಗುರುತಿಸಲಾಯಿತು.

ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್, ಡಿ ಎಲ್, ಆರ್ ಸಿ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ-9 ರಿಂದ ನಿ ಪಿ- 13 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್, ಡಿ ಎಲ್, ಆರ್ ಸಿ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

**ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.